ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ 99 ಜನರಲ್ಲಿ ಹೆಚ್ಚು ಕಡಮೆ ನೂರು ಜನರಲ್ಲಿ 31 ನೆಯ ಹೆಸರು ಕುಮಾರಿ ಎ. ಶಕಿಕರಾ ಇವರನ್ನು ಬಿಟ್ಟರೆ ಇನ್ನು ಯಾವ ಹೆಣ್ಣು ಮಕ್ಕಳ ಹೆಸರೂ ಇಲ್ಲ, ಹಾಗಿದ್ದರೆ ಹೆಣ್ಣು ಮಕ್ಕಳಿಗೆ ಕೊಟ್ಟಿರುವುದು ಕೇವಲ ಶೇಕಡ ಒಂದರಷ್ಟು ಮಾತ್ರವೆ?

ಶ್ರೀ ರಾಮಕೃಷ್ಣ ಹೆಗಡೆ.—ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಮೀಸಲಾಗಿಟ್ಟಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಅವರು ಮುಂದೆ ಬರಲಿಲ್ಲವೆಂದು ತೋರಿಸುತ್ತದೆ. ಒಂದೇ ಒಂದು ಕಡೆ ಬಿ. ಡಿ. ಓ. ಕೆಲಸ ಮಾಡುತ್ತಿರುವ ಹೆಣ್ಣು ಮಗಳು ಬಹಳ ಕಷ್ಟಪಡುತ್ತಿದ್ದಾರೆ.

Sri V. S. PATIL.—Out of these 99 selected, is there any one whose mother-tongue is Marathi ?

Sri RAMAKRISHNA HEGDE:—I cannot state here whose mother-tongue is Marathi or Tamil or Kannada.

Mr. SPEAKER.—So, the Government require notice.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಪಟ್ಟಿಯಲ್ಲ 21 ನೆಯವರು ಪಿ. ಅಬ್ದುರ್ಲಾ ಕುನ್ಹಿ ಎನ್ನುವವರು ಈಗ ಮಂಗಳೂರಿನಲ್ಲಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆಂದು ಹೇಳಿದಿರಿ, ಹಾಗಿದ್ದ ಮೇಲೆ ಕೇರಳದ ವಿಳಾಸವನ್ನು ಹೇಗೆ ಕೊಟ್ಟರು ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರಶ್ನೆಯಲ್ಲಿ native district ಎಂದು ಕೇಳಿದ್ದರು. ಎಂದರೆ ಹುಟ್ಟಿದ ಜಿಲ್ಲೆ ಕೇರಳದಲ್ಲಿ ಅವರು ಹುಟ್ಟಿರಬಹುದು, ಬೆಳೆದಿರುವುದು ಮೈಸೂರಿನಲ್ಲಿರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ವಿಳಾಸ ಕೊಡಬೇಕಾದದ್ದು ಅವರ ಕರ್ತವ್ಯ. ಕೇರಳದ ವಿಳಾಸ ಕೊಟ್ಟರೆ ಕೇರಳಕ್ಕೆ ಬರೆಯುತ್ತಾರೆಯೋ ಅಥವಾ ಮಂಗಳೂರಿಗೆ ಬರೆಯುತ್ತಾರೆಯೊ ?

ಶ್ರೀ ರಾಮಕೃಷ್ಣ ಹೆಗಡೆ.—Native place ಎಂದರೆ, ಯಾವ ಜಿಲ್ಲೆಯಲ್ಲಿ ಹುಟ್ಟಿದರು ಎಂಬುದು ಖಾಸವಾಗಿರುವುದು, ವಿದ್ಯಾಭ್ಯಾಸ ಪಡೆದದ್ದು ಮೈಸೂರಾದರೆ, he is entitled to get appointed.

ಶ್ರೀ ಪಿ. ವೆಂಕಟಗಿರಿಯಪ್ಪ.—ನೇಮಕ ಮಾಡುವಾಗ ಉತ್ತರ ಕರ್ನಾಟಕಕ್ಕೆ ಇಷ್ಟು, ಹಳೆಯ ಮೈಸೂರಿಗೆ ಇಷ್ಟು, ಮರಾಠಿಯವರಿಗಿಷ್ಟು ಎಂದು ನಿಗದಿ ಮಾಡುವ ನಿಯಮವಿದೆಯೋ ? ಅಥವಾ ಬರೀ merit ಮೇಲೆ ನೇಮಕ ಮಾಡುತ್ತಾರೋ ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ನಿಗದಿ ಮಾಡುವುದಿಲ್ಲವೆಂಬುದು ಸ್ವತಃ ಸಿದ್ಧವಾಗಿದೆ,

Mr. SPEAKER.—I go to passed over questions. Question No. 411 of Sri Narayan Gowda, he is not here.

Sri Krishna said that his question has been.....

Sri S. M. KRISHNA.—Sir, I would like to correct my self.....

Mr. SPEAKER.—I do not want the House to have the impression...

Sri S. M. KRISHNA.—I apologise to the House as well as to you, Sir.

Mr. SPEAKER.—It is all right. But Sri Krishna cannot put the question now. But it will be taken up if there is time.

Next question Sri M. B. Shetty is not here. So, Sri Krishna may put question No. 468.

Drawing of Maintenance Grants from the Taluk Board, Maddur.

*Q.—468. Sri S. M. KRISHNA (Maddur).—

Will the Government be pleased to state:—

(*a*) whether it has come to the notice of the Government that the maintenance grants of Rs. 2,000 and Rs. 3,000 for the years 1959-60 and 1960-61 respectively from the Taluk Board, Maddur, has been drawn by a person who is not connected with the school;

(SRI S. M. KRISHNA)

(*b*) whether the granted amount has been credited to the school authorities and cash book;

(*c*) whether it has been utilised for the maintenance of the High School;

(*d*) whether it is not a fact that the management of the high school rests with the body that is separate?

A.—Sri RAMAKRISHNA HEGDE (Minister for Co-operation and Development).—

(*a*) No.

(*b*) The receipt of these grants in-aid amounts has been accounted for in the cash account of Grama Vidyabhivridhi Sangha to which it was made.

(*c*) The Chief Executive Officer reports that the amounts have been accounted for and utilised for the benefit of the school, but the matter is being further investigated.

(*d*) No.

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಗ್ರಾಮ ವಿದ್ಯಾಭಿವೃದ್ಧಿ ಸಂಘ ಯಾವ ಸ್ಥಳದಲ್ಲಿದೆ?

ಶ್ರೀ ರಾಮಕೃಷ್ಣ ಹೆಗಡೆ.—ಮದ್ದೂರು ತಾಲ್ಲೂಕಿನಲ್ಲಿದೆ.

ಶ್ರೀ ಎಸ್. ಎಂ. ಕೃಷ್ಣ.—ಆ ಊರಿನ ಹೆಸರೇನು?

ಶ್ರೀ ರಾಮಕೃಷ್ಣ ಹೆಗಡೆ.—ಸಂಘ ಎಲ್ಲಿದೆಯೋ ಗೊತ್ತಿಲ್ಲ, ಆದರೆ ಅದು ನಡೆಸುತ್ತಿರುವ ಸ್ಕೂಲು ಬೆಕ್ಕಳಲೆಯಲ್ಲಿದೆ.

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿ ಈ ಹೈಸ್ಕೂಲನ್ನು ನಡೆಸುತ್ತಿರುವ ಜನ, ಹಣವನ್ನು ತಾಲ್ಲೂಕು ಬೋರ್ಡಿನ ಸದಸ್ಯರು ಡ್ರಾ ಮಾಡಿದ್ದಾರೆ, ಇದು ಹೈಸ್ಕೂಲಿನ ಲೆಕ್ಕಪತ್ರಗಳಲ್ಲಿ ಬಂದಿಲ್ಲ, ಖರ್ಚು ಮಾಡಿದ್ದಾರೆಂದು ತಿಳಿಸಿದ್ದಾರೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥ ಆಪಾದನೆ ಬಂದಿಲ್ಲ. ಡ್ರಾ ಮಾಡಿದ ವ್ಯಕ್ತಿ ತಾಲ್ಲೂಕು ಬೋರ್ಡಿನ ಸದಸ್ಯರಲ್ಲದೆ ಯಾವ ಸಂಸ್ಥೆ ಈ ಸ್ಕೂಲನ್ನು ನಡೆಸುತ್ತಿದೆಯೋ ಆ ಸಂಸ್ಥೆಯ ಸದಸ್ಯರೂ ಆಗಿದ್ದರು.

ಶ್ರೀ ಜಿ. ವಿ. ಗೌಡ.—ಈ ಗ್ರಾಂಟನ್ನು ಕೊಡುವುದಕ್ಕೆ ಮೊದಲು ಸಂಬಂಧಪಟ್ಟ ಡೆಪ್ಯುಟಿ ಕಮಿಷನರು ಅಥವಾ ಡಿವಿಜನಲ್ ಕಮಿಷನರು ಅಂಗೀಕಾರ ಮಾಡಿದ್ದಾರೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಕೊಡುವುದಕ್ಕೆ ಮೊದಲು ಅಂಗೀಕಾರ ಮಾಡುವುದಿಲ್ಲ. ತಾಲ್ಲೂಕು ಬೋರ್ಡು ಕೂಡ ಅಟಾನಮಸ್ ಬಾಡಿ. ಅಲ್ಲಿ ನಾವು ರೆವೆನ್ಯೂ ಅಧಿಕಾರಿಗಳನ್ನು ಹಾಕಿದರೆ ಅವರು ಅದನ್ನು ಒಪ್ಪಿಕೊಳ್ಳುವುದಿಲ್ಲ, ವಿರೋಧ ಮಾಡುತ್ತಾರೆ.

ಶ್ರೀ ಕೆ. ಎಚ್. ರಂಗನಾಥ್.—ಅದು ರಿಜಿಸ್ಟರಾದ ಸಂಘವೇ ಅಥವಾ ಅಲ್ಲವೇ; ರಿಜಿಸ್ಟರಾದ ಸಂಘವಾಗಿದ್ದರೆ ಅದರ ಅಡ್ರೆಸ್ ಇರಬೇಕಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಗೊತ್ತಿಲ್ಲ. ಈಗ ಆಡಿಟ್ ನಡೆಯುತ್ತಿದೆ. ಅದಕ್ಕಾಗಿಯೇ ನಾನು ಹೇಳಿರುವುದು "Further investigations are in progress" ಎಂದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕು ಬೋರ್ಡ್ ಸದಸ್ಯರಾಗಿ ಅವರು ತೆಗೆದುಕೊಂಡ ಹಣ ದುರುಪಯೋಗವಾಗಿದ್ದರೂ, ಅವರನ್ನು ಸ್ಕೂಲ್ ಕಮಿಟಿಯಿಂದ ತೆಗೆದುಹಾಕಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು?

1.00 P.M.

Mr. SPEAKER.—The answer is that the enquiry is in progress. Question hour is over.